**ಇಂದು ದಿಃ 01-07-2022 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರಃ ಶ್ರೀ ಬಿ.ಎಂ.ಎಸ್ ವಕೀಲರಿಂದಃ**

ನಾವು ಮತ್ತು ವಾದಿಯರು ಪಿತ್ರಾರ್ಜಿತ ಆಸ್ತಿಗಳನ್ನು ಮತ್ತು ಮನೆಗಳನುನ ಭಾಗ ಮಾಡಿಕೊಂಡಿದ್ದೇವೆಂದರೆ ಸರಿ, ಸಾಕ್ಷಿಗೆ ಒಂದು ಕರಾರು ಪತ್ರವನ್ನು ತೋರಿಸಲಾಗಿ, ಅದನ್ನು ನೋಡಿ ಗುರುತಿಸಿದ್ದಾರೆ. ಸದರಿ ದಾಖಲೆಯನ್ನು ನಿ.ಪಿ-44 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ-44(ಎ) ಎಂದು ಗುರುತಿಸಲಾಯಿತು. ವಾದಿಗೆ ಸರ್ವೆ ನಂಬರ್ 18 ರ ಜಮೀನನ್ನು ಬಿಟ್ಟು, ಬೇರೆ ಮೂಲೆಯಲ್ಲಿ ಜಮೀನನ್ನು ಕೊಡುತ್ತಿದ್ದೇವೆ ಎಂದರೆ, ಸಾಕ್ಷಿಯು 18 ರಲ್ಲಿಯೇ ಬರುತ್ತದೆ ಎಂದು ಉತ್ತರಿಸುತ್ತಾರೆ. ಆ ಮೂಲೆಗೆ ಯಾವುದೇ ದಾಖಲೆಗಳು ಇರುವುದಿಲ್ಲ. ನಾನು ಬಿರ್ಲಾ ಕಂಪನಿಯಲ್ಲಿ ಕೆಲಸ ಮಾಡಿದ ಬಗ್ಗೆ ಮತ್ತು ಬೇರೆಯವರ ಜಮೀನುಗಳನ್ನು ಸಾಗುವಳಿ ಮಾಡಿ ಬಂದ ಆಧಾಯದಿಂದ ಆಸ್ತಿಗಳನ್ನು ಖರೀದಿಸಿದ್ದೇನೆಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಒಟ್ಟು ಕುಟುಂಬದಿಂದ ಹೊರೆಗೆ ಹೋಗಿರುವುದಿಲ್ಲ ಮತ್ತು ಸ್ವತಂತ್ರ ದುಡಿಮೆ ಮಾಡಿರುವುದಿಲ್ಲ. ಆದ್ದರಿಂದ ನನ್ನ ಹತ್ತಿರ ದಾಖಲೆಗಳು ಇರುವುದಿಲ್ಲ ಎನ್ನುವುದು ಸರಿಯಲ್ಲ. ಸರ್ವೆ ನಂಬರ್ 18/1 ರಲ್ಲಿ ಎಲೆ ತೋಟ ಇತ್ತು ಎಂದರೆ ಸರಿ. ಸದರಿ ಜಮೀನಿನಲ್ಲಿ ಬೋರ್ ವೆಲ್ ಇತ್ತು ಎಂದರೆ ಸಾಕ್ಷಿ, ನಮ್ಮ ಸಹೋದರರು ಎಲ್ಲರೂ ಸೇರಿ ಮಾಡಿಕೊಂಡಿದ್ದರು ಎಂದು ಉತ್ತರಿಸುತ್ತಾರೆ. ಸರ್ವೆ ನಂಬರ್ 29/1 ರಲ್ಲಿ ಮೆಕ್ಕೆಜೋಳ, ಹತ್ತಿ , ಕಬ್ಬು ಬೆಳೆಯುತ್ತಿದ್ದರು ಎಂದರೆ ಸರಿ. ಮೊದಲು ಕಾಲುವೆ ನೀರು ಬರುತ್ತಿದ್ದು, ನಂತರ ನಮ್ಮ ತಂದೆ ಮತ್ತು ಅವರ ಸಹೋದರರು ಬೋರ್ ವೆಲ್ ಹಾಕಿಸಿಕೊಂಡಿದ್ದರು. ವೀಳ್ಯಾದೆಲೆಗಳನ್ನು ಪೆಂಡೆಗಳ ಲೆಕ್ಕದಲ್ಲಿ ಮಾರುತ್ತಾರೆ ಎಂದರೆ ಸರಿ. 1 ಎಕರೆಗೆ 6-7 ಪೆಂಡೆಗಳು ಬರುಬಹುದು ಮತ್ತು ಅವರವರ ದುಡಿಮೆಗೆ ತಕ್ಕಂತೆ ಬರಬಹುದು. 1 ಪೆಂಡೆಗೆ 10-14 ಸಾವಿರ ಇರಬಹುದು ಎಂದರೆ ನನಗೆ ಗೊತ್ತಿಲ್ಲ. 1 ಎಕರೆಗೆ ಎಷ್ಟು ಮೆಕ್ಕೆಜೋಳ ಬೆಳೆಯ ಬಹುದು ಎನ್ನುವುದು ಗೊತ್ತಿಲ್ಲ. 2 ಜಮೀನುಗಳ ಆಧಾಯದಿಂದ ಮತ್ತು ಒಟ್ಟು ಕುಟುಂಬದ ಸದಸ್ಯರ ದುಡಿಮೆಯಿಂದ ಕೋಡಿಹಳ್ಳಿ ಜಮೀನುಗಳನ್ನು ಖರೀದಿಸಿದ್ದೇನೆ ಎನ್ನುವುದು ಸರಿಯಲ್ಲ. ಟ್ರಾಕ್ಟರ್ ಖರೀದಿಸುವಾಗ 3 ಜಮೀನುಗಳನ್ನು ನಾನೇ ಆಧಾರ ಮಾಡಿದ್ದು, ನಮ್ಮ ತಂದೆಯನ್ನು ಒಪ್ಪಿಸಿ ಆಧಾರ ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 3 ಜಮೀನುಗಳನ್ನು ಸಾಗುವಳಿ ಮಾಡಲು ಟ್ರಾಕ್ಟರ್ ನ್ನು ಖರೀದಿಸಿದ್ದೇನೆ ಎನ್ನುವುದು ಸರಿಯಲ್ಲ. ಕೋಡಿಹಳ್ಳಿ ಜಮೀನನ್ನು ನಾವು ಸಾಗುವಳಿ ಮಾಡುತ್ತೇವೆ. ನಾನು, ನನ್ನ ಹೆಂಡತಿ ಮತ್ತು ಮಕ್ಕಳು ಒಟ್ಟಿಗೆ ವಾಸವಾಗಿದ್ದೇವೆ ಎಂದರೆ ಸಾಕ್ಷಿ ಒಬ್ಬ ಮಗ

ಬೆಂಗಳೂರಿನಲ್ಲಿ ವಾಸವಾಗಿದ್ದಾನೆಂದು ಉತ್ತರಿಸುತ್ತಾರೆ. ನಾನು ಮತ್ತು ನನ್ನ ಹೆಂಡತಿ ಹಾಗೂ ಇಬ್ಬರು ಮಕ್ಕಳು ಒಟ್ಟಿಗೆ ವಾಸವಾಗಿದ್ದರೂ ಒಬ್ಬ ಮಗ ಬೆಂಗಳೂರಿನಲ್ಲಿ ವಾಸವಾಗಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಇಬ್ಬರು ಮಕ್ಕಳಿಗೆ ಇನ್ನೂ ಮದುವೆಯಾಗಿರುವುದಿಲ್ಲ. ನನ್ನ ಸಹೋದರಿಯರಾದ ರುದ್ರಮ್ಮ ಮತ್ತು ರೇಣುಕಮ್ಮ ಎನ್ನುವವರ ಮದುವೆಯಾಗಿ 2 ತಿಂಗಳ ಒಳಗಾಗಿ ವಾದಿಯ ಮದುವೆಯಾಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಕೋಡಿಹಳ್ಳಿ ಜಮೀನನ್ನು, ವಾದಿಯ ಮದುವೆ ಒಂದು ತಿಂಗಳು ಇದ್ದಾಗ, ನಾನು ಮತ್ತು ನನ್ನ ಮಕ್ಕಳು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಅದು ಅವರಿಗೆ ಸಂಬಂಧಇಲ್ಲದ ವಿಷಯ ಎಂದು ಉತ್ತರಿಸುತ್ತಾರೆ. ಯಾವ ಕಾರಣಕ್ಕಾಗಿ ವಿಭಾಗ ಮಾಡಿಕೊಂಡಿದ್ದೇವೆಂದು ನ್ಯಾಯಾಲಯದಲ್ಲಿ ಹೇಳಿರುವುದಿಲ್ಲ ಎನ್ನುವುದು ಸರಿಯಲ್ಲ. ವಿಭಾಗದ ನಂತರವೂ ನಾನು ಮತ್ತು ನನ್ನ ಮಕ್ಕಳು ಒಟ್ಟಿಗೆ ವಾಸವಾಗಿದ್ದೇವೆ ಎನ್ನುವುದು ಸರಿಯಲ್ಲ. ವಾದಿಗೆ ಕೋಡಿಹಳ್ಳಿ ಜಮೀನನ್ನು ಕೊಡಬಾರದೆನ್ನುವ ಉದ್ದೇಶದಿಂದ ನನ್ನ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮಗ ಉಮೇಶನ ಮೇಲೆ ಕೇಸು ಇದೆ ಎಂದರೆ ಸಾಕ್ಷಿಯು ನನ್ನ ಮೇಲೆಯೂ ಇದೆ ಎಂದು ಉತ್ತರಿಸುತ್ತಾರೆ. ಆ ಕೇಸಿನ ಸಲುವಾಗಿ ಉಮೇಶನ ಹೆಸರಿನಲ್ಲಿರುವ ಜಮೀನನ್ನು ನನ್ನ ಹೆಂಡತಿಯ ಹೆಸರಿಗೆ ದಾನ ಪತ್ರ ಮಾಡಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಅದು ಅವನ ವಯಕ್ತಿಕ ಆಸ್ತಿಯಾಗಿದ್ದರಿಂದ ಆ ರೀತಿ ಮಾಡಿದ್ದಾನೆಂದು ಉತ್ತರಿಸುತ್ತಾರೆ. ಉಮೇಶನಿಗೆ ಉದ್ಯೋಗ ಹೊರತು ಪಡಿಸಿ ಬೇರೆ ಜಮೀನು ಇರುವುದಿಲ್ಲ. ಕೋಡಿಹಳ್ಳಿ ಜಮೀನನ್ನು ಒಟ್ಟು ಕುಟುಂಬದಿಂದ ಖರೀದಿಸಿ ಒಟ್ಟಿಗೆ ಸಾಗುವಳಿ ಮಾಡುತ್ತಿದ್ದೇವೆ ಎನ್ನುವುದು ಸರಿಯಲ್ಲ. ಸಾಕ್ಷಿಗೆ ಒಂದು ರಸೀದಿಯನ್ನು ತೋರಿಸಲಾಗಿ ನಮ್ಮ ತಂದೆಯ ಕೋರಿಕೆಯ ಮೇರೆಗೆ ಹಣ ಜಮಾ ಮಾಡಿದ್ದೇನೆ. ರಸೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-45 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ-45(ಎ) ಎಂದು ಗುರುತಿಸಲಾಯಿತು. ಸರ್ವೆ ನಂಬರ್ 29 ರಜಮೀನನ್ನು ನಾಗರಾಜಪ್ಪ ಎನ್ನುವವರಿಗೆ ಮಾರಾಟ ಮಾಡಿದ್ದು, ಕ್ರಯದ ಬಾಕಿ ವಸೂಲಿಗಾಗಿ ತಕರಾರನ್ನು ಸಲ್ಲಿಸಿದ್ದೆ ಎಂದರೆ ಸರಿ. ನಾನು ಕುಟುಂಬದ ಮೇಲ್ವಿಚಾರಣೆ ಮಾಡುತ್ತಿದ್ದೆ ಎನ್ನುವುದು ಸರಿಯಲ್ಲ. ನಮ್ಮ ತಂದೆ ತಾಯಿ ನಮ್ಮ ಮನೆಗೆ ಯಾವ ವರ್ಷದಂದು ವಾಸಮಾಡಲು ಬಂದು ಪ್ರಾರಂಭಿಸಿದ್ದರು ಎನ್ನುವುದು ನನಗೆ ಹೇಳಲು ಬರುವುದಿಲ್ಲ, ನಮ್ಮ ಸಹೋದರ ಬಿಟ್ಟು ಹೋಗಿದ್ದರಿಂದ ನಮ್ಮ ಜೊತೆಗೆ ವಾಸವಾಗಿದ್ದರು ಎಂದು ಸ್ವಇಚ್ಛೆಯಿಂದ ಹೇಳುತ್ತಾರೆ. ಸಾಕ್ಷಿಯು ಕ್ರಯ ಪತ್ರವನ್ನು ಗುರುತಿಸಲಾಗುವುದಿಲ್ಲ ಎಂದು ಉತ್ತರಿಸುತ್ತಾರೆ. 36X9 ಆಸ್ತಿಯನ್ನು ಮಲೇಶಪ್ಪನಿಗೆ ಕೊಟ್ಟಿರುವುದರಿಂದ ಅದರ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ನನ್ನ ಸಹೋದರಿಯರ ಪ್ರತಿವಾದ ಪತ್ರವನ್ನು ನಾನೇ ಹೇಳಿ ಬರೆಯಿಸಿದ್ದೇನೆ ಎನ್ನುವುದು ಸರಿಯಲ್ಲ. ಪಿ.ಡಬ್ಲೂ -2 ರವರು ನಮ್ಮ ಊರಿನವರು. ನಾನು ಎಲೆ ಪೆಂಡಿಯನ್ನು ಯಾವತ್ತೂ ಮಾರಾಟ ಮಾಡಲು ಬೈಪಾಸ್ ಗೆ ಹೋಗಿರುವುದಿಲ್ಲ. ನಂದಿಗಾವಿ

ಬಸವರಾಜ ನಮ್ಮ ಮನೆಗೆ ಫೋಟೋ ಗ್ರಾಫರ್ ಆಗಿ ಬರುತ್ತಿದ್ದ ಎನ್ನುವುದು ಸರಿಯಲ್ಲ. ನಮ್ಮ ಊರಿನಲ್ಲಿ ನಡೆಯುತ್ತಿದ ನಾಟಕಗಳಿಗೆ ಕಥಾ ಸಂಚಾಲಕನಾಗಿದ್ದೆ ಎನ್ನುವುದು ಸರಿ. ವಾದಿ ನಾಟಕದಲ್ಲಿ ಪಾತ್ರ ಮಾಡುತ್ತಿದ್ದ ಎಂದರೆ ಸರಿ. ಎಸ್.ಕೆ ಹನುಮಂತಪ್ಪ, ಹೆಚ್.ಕೆ ರಾಜಪ್ಪ ಮತ್ತು ಹೆಚ್.ಕೆ ಶಿವುಕುಮಾರ ನನ್ನ ಸ್ನೇಹಿತರು ಎಂದರೆ ಸರಿ. ಆತ್ಮೀಯರು ಎಂದರೆ ಸರಿಯಲ್ಲ. ಎಸ್.ಕೆ ಹನುಮಂತಪ್ಪ ಎನ್ನುವವರು ಮೃತಪಟ್ಟಿದ್ದಾರೆ. ನನ್ನ ಹೆಸರಿಗೆ ಮತ್ತು ಶಿವಕುಮಾರವರ ಹೆಂಡತಿಯ ಹೆಸರಿಗೆ ಒಂದೇ ದಿನ, ಒಂದೇ ಸರ್ವೆ ನಂಬರ್ ನಲ್ಲಿ ಖರೀದಿಯಾಗಿದೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.